ಮೂಲ ದಾವಾ ಸಂಖ್ಯೆ 8 /2016 ಪಿ ಡಬ್ಲ್ಯೂ 1 ಕೊಬಜ್ಜಿಪ್ರಕಾಶ್ ಬಿನ್ ಲೇಟ್ ಕೋಬಜ್ಜಿಸಿದ್ದಪ್ಪ

(ದಿನಾಂಕ 24-08-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಮುಂದುವರೆದ ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಕೆ ಎಂ ಜಿ ವಕೀಲರಿಂದಃ-

ದಾವಾ ಸ್ವತ್ತಿನ ಚಕ್ಕುಬಂದಿಯ ಪೂಃ ಎನ್ ಮಹೇಶಗೌಡರವರ ಸ್ವತ್ತು, ಪಃ ಕುಂಟ್ರ ಬಸಣ್ಣ, ಉಃ ರುದ್ರಮ್ಮ ಹಾಗೂ ದಃಕೋಬಜ್ಜಿ ವಿರೂಪಾಕ್ಷಪ್ಪನವರ ಜಮೀನು ಇರುತ್ತದೆ. ದಾವಾ ಸ್ವತ್ತಿನಲ್ಲಿ ನನ್ನ ತಂದೆಗೆ ಎಷ್ಟು ಭಾಗ ಬಂದಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ವಾದಪತ್ರದಲ್ಲಿ ನನ್ನ ತಂದೆಯ ಪಾಲಿಗೆ ದಾವಾ ಶೆಡ್ಯೂಲ್ ಸ್ವತ್ತಿನ 3 ಎಕರೆ 29 ಸೆಂಟ್ಸ ಹೊಲ ಬಂದಿರುವುದಾಗಿ ಹೇಳಿರುತ್ತೀರಿ ಎಂದರೆ ಸರಿ. ಸದರಿ ಸ್ವತ್ತು ಪ್ರಸ್ತುತ ನನ್ನ ಬಳಿ ಇರುವುದಿಲ್ಲ. ಸದರಿ ದಾವಾ ಸ್ವತ್ತನ್ನು ನನ್ನ ತಂದೆಯವರು ಮಾರಾಟ ಮಾಡಿರುತ್ತಾರೆಂದರೆ ಸರಿಯಲ್ಲ. ಪಾಲುವಿಭಾಗದ ಪ್ರಕಾರ ದಾವಾ ಸ್ವತ್ತು ಭರಮಪ್ಪನವರ ಹೆಸರಿನಲ್ಲಿ ಬಂದಿರುತ್ತದೆಂದರೆ ಸರಿಯಲ್ಲ. ಸದರಿ ದಾವಾಸ್ತಿಯನ್ನು ನನ್ನ ತಂದೆ ಮತ್ತು ದೊಡ್ಡಪ್ಪ ಇಬ್ಬರೂ ಸೇರಿ ಮಾರಾಟ ಮಾಡಿರುತ್ತಾರೆ. ನನ್ನ ತಂದೆಯು ಮಾರಾಟ ಮಾಡಿದಂತಹ 3 ಎಕರೆ 59 ಸೆಂಟ್ಸ ಸ್ವತ್ತು ನನ್ನ ದೊಡ್ಡಮ್ಮನ ಹೆಸರಿನಲ್ಲಿತ್ತು. ನನ್ನ ದೊಡ್ಡಪ್ಪನಿಗೆ ಮಕ್ಕಳು ಇರುವುದಿಲ್ಲವೆಂದರೆ ಸರಿ ಮತ್ತು ಅವರಿಗೆ ವಾರಸುದಾರಯಾರು ಇರುವುದಿಲ್ಲವೆಂದರೆ ಸರಿ. ಸದರಿ 3 ಎಕರೆ 59 ಸೆಂಟ್ಸ ಸ್ವತ್ತು ನನ್ನ ದೊಡ್ಡಪ್ಪನಿಂದ ದೊಡ್ಡಮ್ಮನಿಗೆ ಬಂದಿರುತ್ತದೆಂದರೆ ಸರಿ. ಕಾರಣ ಸದರಿ ಆಸ್ತಿಯ ಮೇಲೆ ನನ್ನ ದೊಡ್ಡಮ್ಮಳು ಸಂಪೂರ್ಣ ಮಾಲೀಕತ್ವವನ್ನು ಹೊಂದಿದ್ದರು ಎಂದರೆ ಸರಿಯಲ್ಲ. ಕಾರಣ ಸದರಿ ಆಸ್ತಿಯನ್ನು ಮಾರಾಟ ಮಾಡಲು ಅವರಿಗೆ ಸಂಪೂರ್ಣ ಹಕ್ಕು ಇತ್ತು ಎಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ನನ್ನ ದೊಡ್ಡಮ್ಮಳು ಪ್ರತಿವಾದಿ ಹೆಸರಿನಲ್ಲಿ ನೊಂದಾಯಿತ ವಿಲ್ ಮೂಲಕ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ನನ್ನ ದೊಡ್ಡಮ್ಮಳ ಮರಣಾ ನಂತರ ಸದರಿ ಆಸ್ತಿಯು ಪ್ರತಿವಾದಿಯ ಹೆಸರಿನಲ್ಲಿ ಮ್ಯುಟೇಶನ್ ವರ್ಗಾವಣೆಯಾಗಿರುತ್ತದೆಂದು ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿಯು ನನ್ನ ಪ್ರತಿವಾದಿಯ ಹೆಸರಿನಲ್ಲಿರುವುದಾಗಿ ನನಗೆ ಸದರಿ ಜಮೀನಿನಲ್ಲಿ ಬೋರ್ ಹಾಕಿಸಲು ಹೋದಾಗ ತಿಳಿದುಬಂದಿರುತ್ತದೆ. ಬೋರನ್ನು ಹಾಕಿಸಲು ಸಕ್ಷಮ ಪ್ರಾಧಿಕಾರದಿಂದ

ಅನುಮತಿಯನ್ನು ಪಡೆದುಕೊಂಡಿರುವುದಿಲ್ಲ. ಬ್ಯಾಂಕಿಗೆ ಸಾಲವನ್ನು ಕೇಳಲು ಯಾವುದೇ ದಾಖಲಾತಿಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ನಾನು ದಾವಾಸ್ತಿಯಲ್ಲಿ ಸ್ವಾಧೀನದಲ್ಲಿರುವುದಿಲ್ಲವೆಂದರೆ ಸರಿಯಲ್ಲ. ಸದರಿ ಜಮೀನು ಪ್ರತಿವಾದಿಯ ಹೆಸರಿನಲ್ಲಿರುವುದು ನನಗೆ ಗೊತ್ತಿದ್ದರೂ ಹಾಗೂ ಪ್ರತಿವಾದಿಯು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವುದು ಗೊತ್ತಿದ್ದರೂ ದಾವಾಸ್ತಿಯನ್ನು ಕಬಳಿಸುವ ಉದ್ದೇಶದಿಂದ ಸದರಿ ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಯು ಪಾಲುವಿಭಾಗದ ಪ್ರಕಾರ ನನ್ನ ದೊಡ್ಡಪ್ಪನ ಪಾಲಿಗೆ ಬಂದಿರುವುದರಿಂದ ಸದರಿ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇರುವುದಿಲ್ಲವೆಂದರೆ ಸರಿಯಲ್ಲ. ನಾನು ಸದರಿ ದಾವಾಸ್ತಿಗೆ ಕ್ಲಾಸ್-1 ವಾರಸುದಾರರಾಗಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನನ್ನ ದೊಡ್ಡಮ್ಮಳು ಪ್ರತಿವಾದಿಯ ಹೆಸರಿಗೆ ವಿಲ್ ನಾಮೆಯನ್ನು ಮಾಡಿಕೊಟ್ಟ ನಂತರದಿಂದ ದಾವಾಸ್ತಿಯಲ್ಲಿ ಆಕೆ ಸ್ವಾಧೀನದಲ್ಲಿರುತ್ತಾರೆಂದರೆ ಸರಿಯಲ್ಲ. ನಮ್ಮ ತಂದೆಯ ಹಿಸ್ಸೆಗೆ ಬಂದಂತಹ ಜಮೀನನ್ನು ಮಾರಾಟ ಮಾಡಿದ್ದು ನಮಗೆ ಜಮೀನು ಇಲ್ಲದ ಕಾರಣ ಸದರಿ ಜಮೀನನ್ನು ಕಬಳಿಸುವ ಉದ್ದೇಶದಿಂದ ಪ್ರತಿವಾದಿಯ ವಿರುದ್ಧ ದಾವೆಯನ್ನು ದಾಖಲುಪಡಿಸಲಾಗಿರುತ್ತದೆಂದರೆ ಸರಿಯಲ್ಲ. ಸದರಿ ದಾವಾಸ್ತಿಯ ಮೇಲೆ ಯಾವುದೇ ಹಕ್ಕು ಅಧಿಕಾರ ಸ್ವಾಧೀನತೆ ಇರುವುದಿಲ್ಲವೆಂದರೆ ಸರಿಯಲ್ಲ. ನಾನು ಸುಳ್ಳು ಪ್ರಮಾಣಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ

ಮರು ವಿಚಾರಣೆ - ಇಲ್ಲ.

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ
ಹಗರಿಬೊಮ್ಮನಹಳ್ಳಿ